# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ–ವಿಭಾಗದ ವಾರ್ಡ್ ಸಂಖ್ಯೆ–152 ಎಸ್.ಜಿ.ಪಾಳ್ಯ ಕಛೇರಿಯಲ್ಲಿ ದಿನಾಂಕ: 20.03.2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ–20–03–2021ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಚಿನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಎಸ್.ಪ್ರಭಾಕರ್, ಮುಖ್ಯ ಅಭಿಯಂತರರು (ಪೂರ್ವ)ಬಿ.ಬಿ.ಎಂ.ಪಿ. | 9480685379 |
| 2 | ಶ್ರೀ.ಸತೀಶ್.ಡಿ ಸ.ಇಂ–152 ವಾರ್ಡ್ | 9964310730 |
| 3 | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 963222304 |
| 4 | ಶ್ರೀ.ಬಿ.ಎಮ್ ಮಹಾದೇವಪ್ಪ ಎ.ಎಸ್.ಐ | 9739089882 |
| 4 | ಶ್ರೀ ಪುರುಷೋತ್ತಮ, (ಎಲೆಕ್ಟ್ರೀಕಲ್, ಬಿ.ಬಿ.ಎಂ.ಪಿ) | 9611177415 |
| 5 | ಶ್ರೀ.ಶಶಿಧರ ಸಹಾಯಕ ಅಭಿಯಂತರರು ಮೂಲಭೂತ ಸೌಕರ್ಯ ಕೇಂದ್ರ | 9341320868 |
| 6 | ಶ್ರೀಮತಿ.ಆಶಾ.ಹೆಚ್. ಸಹಾಯಕ ಅಭಿಯಂತರರು ಬೇಸ್ಕಾಂ | 9900724229 |
| 7 | ಶ್ರೀ.ಕೃಷ್ಣ.ಸಿ ಕೆಲಸ ಪರಿವೀಕ್ಷಕರು ಬಿ.ಡ.ಬ್ಲೂ.ಎಸ್.ಎಸ್.ಬಿ | 9845768405 |
| 8 | ಶ್ರೀ ಸೈಯದ್ ನಜರೂದ್ದಿನ್, ಸದಸ್ಯರು | 9741518897 |
| 9 | ಶ್ರೀ.ವಿ.ಗಿರೀಶ್ ವಿದ್ಯತ್ ವಿಭಾಗ ಬಿ.ಬಿ.ಎಂ.ಪಿ (ದಕ್ಷಿಣ) | 8951596617 |
| 10 | ಶ್ರೀ.ಮಂಜುನಾಥ್.ಪಿ ವಾರ್ಡ್ ಮೇಲ್ವಿಚಾರಕರು ಘ.ತ್ಯಾ.ನಿ | 9740903427 |
| 11 | ಶ್ರೀ.ಮುನಿಂದ್ರ ಮೇಲ್ವಿಚಾರಕರು ಘ.ತ್ಯಾ.ನಿ | 9901002067 |
| 12 | ಶ್ರೀಮತಿ.ಭೂದೇವಿ ತೋಟಗಾರಿಕೆ ಇಲಾಖೆ | 953897538 |
| 13 | ಶ್ರೀ.ಜಿನ್‌ಸನ್ | 9886263227 |
| 14 | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಘ.ತ್ಯಾ.ನಿ | 9980225272 |

1) ಕಳೆದ ಸಭೆಯಲ್ಲಿ ಶ್ರೀ.ವಿಶ್ವಕುಮಾರ ರವರು ಪ್ರಸ್ತಾಪಿಸಿದ್ದ ಮಾರುತಿನಗರ ಸಿಟಿ ಕ್ಲಿನಿಕ್ ಹತ್ತಿರ 2 ಬೀದಿ ದೀಪದ ಫಿಟಿಂಗ್ಸ್ ಹಾಳಾಗಿರುವುದು ಇನ್ನೂ ದುರಸ್ಥಿಯಾಗದಿರುವ ಬಗ್ಗೆ ಸಭೆಯ ಮಾನ್ಯ ಅಧ್ಯಕ್ಷರು ತೀವ್ರ ವಿಷಾದಿಸುತ್ತಾ, ಶ್ರೀ ಜ್ಞಾನೇಶ್ ಸಹಾಯಕ ಅಭಿಯಂತರರು ವಿದ್ಯುತ್ ವಿಭಾಗ ಬಿ.ಬಿ.ಎಂ.ಪಿ ರವರಿಗೆ ದೂರವಾಣಿ ಮುಖೇನ ಮಾತನಾಡಿ ಬೀದಿ ದೀಪದ ಫಿಟಿಂಗ್ಸ್‌ಗಳನ್ನು ದುರಸ್ಥಿಪಡಿಸಲು ತಿಳಿಸಿದರು.
2) ಸಭೆಯಲ್ಲಿ ಹಾಜರಿದ್ದ ಶ್ರೀ.ಬಿ.ಎಂ ಮಹಾದೇವಪ್ಪ ಎ.ಎಸ್.ಐ ಮಡಿವಾಳ ರವರು ಮಾತನಾಡಿ, ಧರ್ಮರಾಂ ಕಾಲೇಜು, ಡೈರಿ ವೃತ್ತದಲ್ಲಿ ಬೀದಿ ದೀಪ ಹಾಳಾಗಿರುವ ಬಗ್ಗೆ ಸಭೆ ಗಮನಕ್ಕೆ ತಂದರು ಹಾಗೂ ಶ್ರೀ.ನಸರೂದ್ದಿನ್ ವಾರ್ಡ್ ಸದಸ್ಯರು ಮಾತನಾಡುತ್ತಾ, ಬಾಲಾಜಿನಗರ 6ನೇ ಎ,ಬಿ,ಸಿ, ಮತ್ತು ಡಿ ರಸ್ತೆಗಳಲ್ಲಿ ಬೀದಿ ದೀಪಗಳು ಸರಿಯಾಗಿ ಕಾರ್ಯನಿರ್ವಹಿಸದ ಬಗ್ಗೆ ತಿಳಿಸಿದರು.

   ಈ ಬಗ್ಗೆ ಸಂಬಂಧಪಟ್ಟ ಇಲಾಖೆಯಿಂದ ಅಗತ್ಯ ಕ್ರಮವಹಿಸಲು ಸಹಾಯಕ ಅಭಿಯಂತರರರಿಗೆ ಸೂಚಿಸಿದರು.
3) ಕಳೆದ ಸಭೆಯಲ್ಲಿ ಪ್ರಸ್ತಾಪಿಸಲಾಗಿದ್ದ ಬಾಲಾಜಿನಗರ 6ನೇ ಎ,ಬಿ,ಸಿ, ಮತ್ತು ಡಿ ರಸ್ತೆಗಳಲ್ಲಿ ರಸ್ತೆಯಲ್ಲಿ ಮ್ಯಾನ್‌ಹೋಲ್‌ಗಳ ದುರಸ್ಥಿ ಕಾರ್ಯ ಪೂರ್ಣಗೊಂಡಿದ್ದು, ಇದರ ಅವಶೇಷಗಳನ್ನು ತೆರವುಗೊಳಿಸಲು ಸಭೆಗೆ ಹಾಜರಿದ್ದ ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆ ಕೆಲಸ ಪರಿವೀಕ್ಷಕರಾದ ಶ್ರೀ ಕೃಷ್ಣ ರವರಿಗೆ ಕ್ರಮವಹಿಸಲು ತಿಳಿಸಿದರು.

4) ಶ್ರೀ ಜಿನ್‌ಸನ್ ವಾರ್ಡ್ ಸದಸ್ಯರು ಮಾತನಾಡಿ, ಸೆಂಟ್‌ಫ್ರಾನ್ಸಿಸ್ ಶಾಲೆ 100 ಮಿಟರ್ ವ್ಯಾಪ್ತಿಯ ಸುತ್ತಲು ಬೀಡಿ ಸಿಗರೇಟ್ ಮಾರಟ ಮಾಡಲು ನಿಶೇಧಿಸಿದ್ದರೂ ಸಹ ಅಲ್ಲಿರುವ ಅಂಗಡಿಗಳಲ್ಲಿ ಬೀಡಿ ಸಿಗರೇಟ್ ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ ಎಂದು ತಿಳಿಸಿದರು. ಈ ಬಗ್ಗೆ ಸಭೆಗೆ ಹಾಜರಿದ್ದ ಶ್ರೀ.ಬಿ.ಎಂ. ಮಹಾದೇವಪ್ಪೆ.ಎಸ್.ಐ ಸುದ್ದಗುಂಟೆಪಾಳ್ಯ ರವರಿಗೆ ಕೂಡಲೇ ಇದರ ಬಗ್ಗೆ ಗಮನ ಹರಿಸಿ ಕಾನೂನು ರೀತ್ಯ ಕ್ರಮ ಜರುಗಿಸಲು ಮಾನ್ಯ ಅಧ್ಯಕ್ಷರು ತಿಳಿಸಿದರು.

5) ಬಾಲಾಜಿನಗರ 6ನೇ ಎ,ಬಿ,ಸಿ, ಮತ್ತು ಡಿ ರಸ್ತೆಗಳ ಪ್ರದೇಶದಲ್ಲಿ ಸೋಳ್ಳೆಗಳು ಹೆಚ್ಚಾಗಿದ್ದು, ಸೋಳ್ಳೆ ನಿವಾರಣೆ ಹೊಗೆ ಸಿಂಪಡಣೆ ಮಾಡಲು ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ ಸಂಬಂಧ ಪಟ್ಟ ಇಲಾಖೆಯಿಂದ ಅಗತ್ಯ ಕ್ರಮವಹಿಸಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

6) ಮಾನ್ಯ ಅಧ್ಯಕ್ಷರು ಮಾತನಾಡಿ, ಪಾಲಿಕೆ ವಾರ್ಡ್ ಅನುದಾನಡಿಯಲ್ಲಿ 2021–22ನೇ ಸಾಲಿಗೆ ಮಿಸಲಿಟ್ಟ ಅನುದಾನಕ್ಕೆ ವಾರ್ಡ್ ಸದಸ್ಯರೊಂದಿಗೆ ಸಮಾಲೊಚನೆ ನಡೆಸಿ, ಚರ್ಚಿಸಿ ಅಗತ್ಯವಾಗಿರುವ ಕಾಮಗಾರಿಗಳನ್ನು ಅಳವಡಿಸಿಕೊಂಡು ಕ್ರಿಯೋಜನೆಯನ್ನು ತಯಾರಿಸಲು ತಿಳಿಸಿದರು.

7) ಶ್ರೀ.ನವೀನ್ ಕಂದಾಯ ಪರಿವೀಕ್ಷರು ಮಾತನಾಡಿ, ಜನವರಿ 2021ರ ಅಂತ್ಯದಲ್ಲಿ ರೂ.1.32 ಕೊಟಿ ಕಂದಾಯವನ್ನು ಸಂಗ್ರಹಿಸಲಾಗಿರುತ್ತದೆ. 33 ಆಸ್ತಿಗಳನ್ನು ಪರಿಷ್ಕರಿಸಲಾಗಿರುತ್ತದೆ ಮತ್ತು ಪ್ರತಿ ಬುಧವಾರ ತೆರಿಗೆ ಡ್ರೈವ್‌ನ್ನು ಹಮ್ಮಿಕೊಳ್ಳಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

8) ತಾವರೆಕೆರೆ ವ್ಯಾಪ್ತಿಯ ಕೆ.ಇ.ಬಿ ಕಚೇರಿ ಹತ್ತಿರ ಕಸದ ಬ್ಲಾಕ್‌ಸ್ಪಾಟ್‌ನ್ನು ತೆರವುಗೊಳಿಸಿದ್ದರೂ ಸಹ ಮತ್ತೆ ಕಸವನ್ನು ಹಾಕುತ್ತಿರುವ ಬಗ್ಗೆ ಆಕ್ಷೇಪಿಸುತ್ತಾ, ಕಸವನ್ನು ಹಾಕುತ್ತಿರುವರನ್ನು ಗುರುತಿಸಿ ಅಗತ್ಯ ಕ್ರಮವಹಿಸಲು ಶ್ರೀ ಅಜಯ್ ಕಿರಿಯ ಆರೋಗ್ಯ ಪರಿವೀಕ್ಷರಿಗೆ ತಿಳಿಸುತ್ತಾ ಮತ್ತು ವಾರ್ಡ್ ಪ್ರದೇಶದ ವ್ಯಾಪ್ತಿಯಲ್ಲಿ ಕಸವನ್ನು ಸರಿಯಾಗಿ ವಿಂಗಡಿಸದೇ ಇರುವವರಿಗೆ, ಕಸವನ್ನು ಎಲ್ಲೇಂದರಲ್ಲಿ ಎಸೆಯುತಿರುವವರಿಗೆ ಮತ್ತು ಮಾಸ್ಕನ್ನು ಧರಿಸದೇ ಇರುವವರನ್ನು ಗುರುತಿಸಿ ದಂಡವನ್ನು ವಿಧಿಸಲು ಸಭೆ ಅಧ್ಯಕ್ಷರು ಮಾರ್ಷಲ್‌ಗಳಿಗೆ ಸೂಚಿಸಿದರು.

ಕೊನೆಯದಾಗಿ, ಅಧ್ಯಕ್ಷರು ಸಭೆಯ ಎಲ್ಲಾ ಸದಸ್ಯರೊಂದಿಗೆ ಮಾತನಾಡಿ, ವಾರ್ಡ್ ವ್ಯಾಪ್ತಿಪ್ರದೇಶದಲ್ಲಿ ಮಹಾಮಾರಿ ಸಾಂಕ್ರಾಮಿಕ ರೋಗ ಕೋರೋನಾ 2ನೇ ಹಂತದ ಅಲೆ ಹೆಚ್ಚಾಗುತ್ತಿದ್ದು, 60ವರ್ಷದ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಕೊರೋನ ಲಸಿಕೆಯನ್ನು ತೆಗೆದುಕೊಳ್ಳುವಸಲುವಾಗಿ ಪ್ರಚಾರಮಾಡಲು ತಿಳಿಸಿದರು ಹಾಗೂ ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

S. Prabhakar
(ಶ್ರೀ. ಎಸ್.ಪ್ರಭಾಕರ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ–ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ.